

ಚಿತ್ರ: ಅನೂಪ್ ಆರ್. ತಿಪ್ಪೇಸ್ವಾಮಿ

ಸಾಕ್ಷರರಾಗಿ ಶಾಲೆ ಪ್ರವೇಶಿಸುವ ಅನೇಕ ಮಕ್ಕಳು ವೈದ್ಯರಾಗುತ್ತಾರೆ, ಎಂಜಿನಿಯರ್‌ಗಳಾಗುತ್ತಾರೆ" ಎನ್ನುತ್ತಾರೆ. ಅವರ ಮಾತುಗಳಲ್ಲಿ ನವೋದಯ ಶಾಲೆಗಳ ಯಶಸ್ಸು ಇಣುಕುವಂತಿದೆ.

ನವೋದಯ ಶಾಲೆಗಳಲ್ಲೂ ಭ್ರಷ್ಟಾಚಾರ ಇಲ್ಲದಿಲ್ಲ. "ಪ್ರತಿ ಮಗುವಿನ ತಿಂಗಳ ಆಹಾರಕ್ಕೆ ಸರ್ಕಾರ 1600 ರೂಪಾಯಿ ನೀಡುತ್ತದೆ. ಮಕ್ಕಳಿಗೆ ಒಳ್ಳೆಯ ಊಟ ಹಾಕಲು ಇಷ್ಟು ಹಣ ಸಾಕು. ಆದರೆ, ಮಕ್ಕಳ ಊಟದಲ್ಲೂ ಪಾಲು ಪಡೆಯುವವರಿದ್ದಾರೆ. ನವೋದಯ ಶಾಲೆಗಳ ಬಹುತೇಕ ಪ್ರಾಂಶುಪಾಲರುಗಳು ಕೋಟ್ಯಧಿಪತಿಗಳು" ಎಂದು ಹೆಸರು ಹೇಳಲು ಬಯಸದ ಶಿಕ್ಷಕರೊಬ್ಬರು ವಿಷಾದದಿಂದ ಹೇಳುತ್ತಾರೆ.

## ಕೊರಗ ಮಕ್ಕಳಿಗೆ ವಸತಿನಿಲಯ

ಕರಾವಳಿಯ ಸುರತ್ಕಲ್‌ನಲ್ಲಿ ಕೊರಗರ ಸಮುದಾಯದ ಮಕ್ಕಳಿಗಾಗಿ ವಸತಿ ಶಾಲೆಯೊಂದಿದೆ. ಒಂದರಿಂದ ಹತ್ತನೇ ತರಗತಿಯವರೆಗಿನ ಮಕ್ಕಳು ವಿಶೇಷ ಈ ವಸತಿಶಾಲೆಯಲ್ಲಿ ಓದುತ್ತಿರುತ್ತಾರೆ. ಮಕ್ಕಳ ಅಳು–ನಗು ಇಲ್ಲಿ ಮಾಮೂಲು. ಕಳೆದ ಐದು ವರ್ಷಗಳಿಂದ ಈ ವಸತಿ ಶಾಲೆಯಲ್ಲಿ ವಾರ್ಡನ್ ಆಗಿ ಕಾರ್ಯ ನಿರ್ವಹಿಸುತ್ತಿರುವ ವಿಜಯ್ ಅವರು, ಮಕ್ಕಳಸಂಗದಲ್ಲಿ ನೋವು–ನಲಿವು ಎರಡನ್ನೂ ಕಂಡಿದ್ದಾರೆ. ಈ ಶಾಲೆಯ ಮುಖ್ಯೋಪಾಧ್ಯಾಯಿನಿ ಸುನಂದಾ ಅವರು ಕೂಡ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಳ್ಳುವಲ್ಲಿ ಮುತುವರ್ಜಿ ವಹಿಸಿದ್ದಾರೆ.

ಮೊದಲು ಕೊರಗ ಸಮುದಾಯದ ಮಕ್ಕಳಷ್ಟೇ ಇಲ್ಲಿದ್ದರು. ಈಚೆಗೆ ಅವರ ಸಂಖ್ಯೆ ಕಡಿಮೆಯಾದುದರಿಂದ ಬೇರೆ ಮಕ್ಕಳನ್ನೂ ವಸತಿಶಾಲೆಗೆ ಸೇರಿಸಿಕೊಳ್ಳಲಾಗಿದೆ. ಬೇರೆ ಮಕ್ಕಳು ಈ ಶಾಲೆಗೆ ಸೇರ್ಪಡೆಯಾಗಿರುವುದರಿಂದ ಕೊರಗ ಮಕ್ಕಳ ಬೆಳವಣಿಗೆಗೆ ಹೊಸತೊಂದು ಆಯಾಮ ದೊರೆತಿದೆ. ಪ್ರಸ್ತುತ ಸುರತ್ಕಲ್‌ನ ವಸತಿಶಾಲೆಯಲ್ಲಿ 152 ಮಕ್ಕಳಿದ್ದು, ಅವರಲ್ಲಿ 50 ಮಕ್ಕಳು ಕೊರಗ ಸಮುದಾಯದವರು.

ಒಮ್ಮೆ ಹುಡುಗನೊಬ್ಬ ವಸತಿನಿಲಯದಿಂದ ತಪ್ಪಿಸಿಕೊಂಡು ಹೋದುದು ವಿಜಯ್ ಅವರನ್ನು ಒತ್ತಡಕ್ಕೆ ಸಿಲುಕಿಸಿತ್ತು. ಮಗು ನಾಪತ್ತೆಯಾದ ಪ್ರಕರಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು. ನಂತರ ಮಗು ಪತ್ತೆಯಾಯಿತು.



